


■ ಸವಿತಾ ಶ್ರೀನಿವಾಸ
ಕಲೆ: ಮೋನಪ್ಪ ಎಚ್.ಎಸ್.

## ಹನ್ಸಾ ಮನೆಯಲ್ಲಿ ಅವಿರತ್‌ಗೆ ಸತ್ಕಾರ

ವರ್ಕ್‌ಶಾಪ್‌ನೊಳಗೆ 'ಶೈನಿ'ಯ ಜೊತೆಗೆ ಇತರೆ ಎಂಜಿನಿಯರ್‌ಗಳೂ ಲಭ್ಯವಿದ್ದುದರಿಂದ ಹನ್ಸಾ ಪರಿಸ್ಥಿತಿಯನ್ನು ಎಲ್ಲರಿಗೂ ಒಮ್ಮೆಲೇ ವಿವರಿಸಿ ಹೇಳಲು ಅನುಕೂಲವಾಗಿತ್ತು.

'ಮ್ಯಾಮ್. ಈ ರೊಬೋಗಳ ಐಡಿಗಳು ನಮಗೆ ಬೇಕಾಗಿವೆ. ಅವುಗಳ ಪರೀಕ್ಷೆಯ ಬಳಿಕ ನಾವು ಸ್ಪಷ್ಟ ಮಾಹಿತಿಯನ್ನು ತಿಳಿಸುತ್ತೇವೆ.'

'ಓಹ್... ಅದಕ್ಕೇನಂತೆ. ಈ ಕಮಾಂಡೋ ರೊಬೋಗಳನ್ನು ನಮ್ಮ ಸುಪರ್ದಿಗೆ ಒಪ್ಪಿಸುವಾಗಲೇ ಅವುಗಳ ಐ.ಡಿ. ಸಂಖ್ಯೆ ಹಾಗೂ 'ಮೇಕ್' ಕುರಿತಾಗಿ ನಮಗೆ ಮಾಹಿತಿ ನೀಡಿದ್ದಾರೆ' ಎನ್ನುತ್ತಾ ಹನ್ಸಾ ತನ್ನ ಎಂ.ಪಿ. ವಾಕಿಯಲ್ಲಿದ್ದ ಮಾಹಿತಿಯನ್ನು ಶೈನಿಯ ಉಪಕರಣಕ್ಕೆ ರವಾನಿಸಿದ್ದಳು. ಭದ್ರತಾಪಡೆಯ ಮುಖ್ಯಸ್ಥನೂ ಅವಳನ್ನನುಸರಿಸಿದ್ದ.

ಸ್ವಲ್ಪ ಹೊತ್ತು ಅವರು ರವಾನಿಸಿದ್ದ ಮಾಹಿತಿಯನ್ನು ತನ್ನ ಸಹಚರರೊಂದಿಗೆ ತುಲನೆ ಮಾಡಿದ ಬಳಿಕ ಶೈನಿ ತನ್ನ ಅಭಿಪ್ರಾಯವನ್ನು ಕಾತುರದಿಂದ ಕಾಯುತ್ತಿದ್ದ ಹನ್ಸಾ ಹಾಗೂ ಮುಖ್ಯಸ್ಥರೊಂದಿಗೆ ಹಂಚಿಕೊಂಡಿದ್ದರು.

